# ಬೆಂಗಳೂರು ವಿಶ್ವವಿದ್ಯಾಲಯ

ರಾಷ್ಟ್ರೀಯ ಸೇವಾ ಯೋಜನೆ

ಎನ್.ಎಸ್.ಎಸ್. ಭವನ, ಜ್ಞಾನಭಾರತಿಆವರಣ, ಬೆಂಗಳೂರು-56.

NACC Accredited with 'A' Grade

**ಪ್ರೊ. ಹೆಚ್. ಆರ್. ರವೀಶ್,**
ಕಾರ್ಯಕ್ರಮ ಸಂಯೋಜನಾಧಿಕಾರಿ

ಕಚೇರಿ ದೂರವಾಣಿ : 080-23214685
ಮೊಬೈಲ್ : 9480817911


ಸಂಖ್ಯೆ: ಬೆಂ.ವಿ/ರಾಸೇಯೋ/ 46 /2022-2023

ದಿನಾಂಕ : 16.07.2022.

To,
The Principal,
Surana Evening College,
K.S Town, Bangalore-560 060.

ಮಾನ್ಯರೆ,

**ವಿಷಯ :ಎನ್.ಎಸ್.ಎಸ್.ಘಟಕವನ್ನು ಮಂಜೂರು ಮಾಡುವ ಕುರಿತು.**

ಉಲ್ಲೇಖ :1.ತಮ್ಮ ಪ್ರಸ್ತಾವನೆ ದಿನಾಂಕ. 14.07.2022
2.ಸರ್ಕಾರದ ಆದೇಶ ಸಂಖ್ಯೆ :ಇಡಿ/11/ವಿವಿಧ/2015 ಬೆಂಗಳೂರು, ದಿ.4ಮೇ.2015

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಭಾರತ ಸರ್ಕಾರವು ಎನ್.ಎಸ್.ಎಸ್. ಕಾರ್ಯಚಟುವಟಿಕೆಗಳ ವ್ಯಾಪ್ತಿಯನ್ನು ವಿಸ್ತರಿಸುವ ದೃಷ್ಟಿಯಿಂದ ಸ್ವಯಂ ಆರ್ಥಿಕ ನೆರವಿನ ಎನ್.ಎಸ್.ಎಸ್.ಘಟಕಗಳ ನಿಯಮಾವಳಿಯನ್ನು ರೂಪಿಸಿರುತ್ತದೆ. ಅದರಂತೆ ರಾಜ್ಯ ಸರ್ಕಾರ ಮೇಲ್ಕಂಡ ಉಲ್ಲೇಖ 02 ಅನ್ವಯ ಆದೇಶ ಮಾಡಿರುತ್ತದೆ. ಸದರಿ ಆದೇಶದಂತೆ ಪದವಿ ತರಗತಿ ಪ್ರವೇಶಾತಿ ಸಂದರ್ಭದಲ್ಲಿ ಎನ್.ಎಸ್.ಎಸ್.ಶುಲ್ಕವನ್ನು ಸಂಗ್ರಹಿಸಿ ಸ್ವಯಂ ಆರ್ಥಿಕ ನೆರವಿನ ಎನ್.ಎಸ್.ಎಸ್.ಘಟಕಗಳನ್ನು ಮುನ್ನಡೆಸಬಹುದಾಗಿದೆ. ಅದರಂತೆ ಈ ಕೆಳಕಂಡ ಷರತ್ತು ಮತ್ತು ನಿಭಂದನೆಗಳಿಗೆ ಒಳಪಟ್ಟು ತಮ್ಮ ಕಾಲೇಜಿಗೆ 2022-2023ನೇ ಸಾಲಿಗೆ ಅರ್ಧ(50 ಸ್ವಯಂ ಸೇವಕರು) ಎನ್.ಎಸ್.ಎಸ್.ಘಟಕವನ್ನು ಮಂಜೂರು ಮಾಡಲಾಗಿದೆ. ಈ ಘಟಕವು ಕೇವಲ ಹಣಕಾಸಿನ ನೆರವನ್ನು ಹೊರತುಪಡಿಸಿ ಇತರೆ ಎನ್.ಎಸ್.ಎಸ್.ನಿಯಮಾವಳಿಗೆ ಒಳಪಟ್ಟಿರುತ್ತದೆ. ಭಾರತ ಸರ್ಕಾರದ ನಿಯಮಾವಳಿಯ ಪ್ರತಿ ಮತ್ತು ರಾಜ್ಯ ಸರ್ಕಾರದ ಆದೇಶದ ಪ್ರತಿಯನ್ನು ಈಗಾಗಲೇ ತಮಗೆ ನೀಡಲಾಗಿದೆ.

**ಷರತ್ತು ಮತ್ತು ನಿಬಂಧನೆಗಳು :-**

1. ರಾಷ್ಟ್ರೀಯ ಸೇವಾ ಯೋಜನೆಯ ಕೈಪಿಡಿ ಹಾಗೂ ರಾಜ್ಯ ಸರ್ಕಾರದ ಆದೇಶಗಳ ಹಿನ್ನಲೆಯಲ್ಲಿ ಅನುದಾನ ಪಡೆದ ಘಟಕಗಳು ಖರ್ಚು ಮಾಡುವ ಮಾದರಿಯಲ್ಲಿ ಈ ಕೆಳಕಂಡಂತೆ ಖರ್ಚು ವೆಚ್ಚವನ್ನು ನಿರ್ವಹಿಸುವುದು.

| ಕ್ರ.ಸಂ. | ವಿವರ | ಶೇಕಡವಾರು | ಮೊತ್ತ |
|---|---|---|---|
| 1. | ಊಟ ಉಪಚಾರ | 61% | 6,250-00 |
| 2. | ಸಾಗಾಟ ವೆಚ್ಚ /ಸಾರಿಗೆ ವೆಚ್ಚ | 7% | 800-00 |
| 3. | ಸಣ್ಣ ವಸ್ತುಗಳ ಖರೀದಿ | 5% | 500-00 |
| 4. | ಸಿಬ್ಬಂದಿ ಭತ್ಯೆ | 2% | 200-00 |
| 5. | ಇತರೆ ಖರ್ಚುಗಳು | 2% | 250-00 |
| 6. | ಎನ್.ಎಸ್.ಎಸ್.ಕಾರ್ಯಕ್ರಮಾಧಿಕಾರಿಯ ಭತ್ಯೆ (ವರ್ಷಕ್ಕೆ ಗರಿಷ್ಠ 4800/-ರೂಪಾಯಿಗಳಿಗೆ ಸೀಮಿತವಾಗಿ) | 23% | 2,400-00 |
| | **ದೈನಂದಿನ ಚಟುವಟಿಕೆಗಳ ವಾರ್ಷಿಕ ಒಟ್ಟು ಮೊತ್ತ** | | 10,400-00 |
| | **7 ದಿನಗಳ ವಾರ್ಷಿಕ ವಿಶೇಷ ಶಿಬಿರದ ಮೊತ್ತ** | | 22,500-00 |

2. ಐವತ್ತು ವಿದ್ಯಾರ್ಥಿಗಳಿರುವ ಅರ್ಧ ಘಟಕ ಸ್ಥಾಪಿಸಿದ್ದಲ್ಲಿ ಗರಿಷ್ಠ 8000/-ರೂಪಾಯಿಗಳನ್ನು ದೈನಂದಿನ ಶಿಬಿರಕ್ಕೆ 22.500/-ಗಳನ್ನು ವಿಶೇಷ ಶಿಬಿರಕ್ಕೆ ಖರ್ಚು ಮಾಡಬಹುದಾಗಿದೆ. ವಾರ್ಷಿಕ ಶಿಬಿರಕ್ಕೆ ವಿಶ್ವವಿದ್ಯಾನಿಲಯದ ಎನ್.ಎಸ್.ಎಸ್.ಅನುದಾನದ ಖರ್ಚು ವೆಚ್ಚವನ್ನು ನಿರ್ವಹಿಸಬೇಕು.

3. ಕ್ರಮ ಸಂಖ್ಯೆ 1 ರಂತೆ ಖರ್ಚು ಮಾಡಿ ಉಳಿದ ಹಣವನ್ನು ಕಾಲೇಜಿನ ಎಲ್ಲಾ ಘಟಕಗಳ ವಿಶೇಷ ಕಾರ್ಯಕ್ರಮಗಳಿಗೆ ಬಳಸಬಹುದಾಗಿದೆ.

4. ಈಗಾಗಲೇ ಕಾಲೇಜಿನಲ್ಲಿ (ಒಂದನೇ ಘಟಕ) ಅನುದಾನದ ಒಂದು ಘಟಕವಿದ್ದು ಇನ್ನೊಂದು ಘಟಕವನ್ನು (ಎರಡನೇ ಘಟಕ) ಸ್ಥಾಪನೆ ಮಾಡಬೇಕಾದರೆ ಪ್ರತಿ ವಿದ್ಯಾರ್ಥಿಯಿಂದ ರೂ.40/-ರಂತೆ ಎನ್.ಎಸ್.ಎಸ್. ಶುಲ್ಕ ಸಂಗ್ರಹಿಸಿ ಸದರಿ ಮೊತ್ತದಲ್ಲಿ ಈ ಎನ್.ಎಸ್.ಎಸ್. ಘಟಕ ಮುನ್ನಡೆಸುವುದು.

5. ತಮ್ಮ ಕಾಲೇಜಿನಲ್ಲಿ ಎನ್.ಎಸ್.ಎಸ್. ಘಟಕ ಇಲ್ಲದಿದ್ದಲ್ಲಿ ಅಂತಹ ಕಾಲೇಜು ಪ್ರತೀ ವಿದ್ಯಾರ್ಥಿಯಿಂದ ರೂ.50/ರಂತೆ ಎನ್.ಎಸ್.ಎಸ್.ಶುಲ್ಕವನ್ನು ಸಂಗ್ರಹಿಸಿ ಸದರಿ ಮೊತ್ತದಲ್ಲಿ ಈ ಎನ್.ಎಸ್.ಎಸ್. ಘಟಕ ಮುನ್ನಡೆಸುವುದು.

6. ಎನ್.ಎಸ್.ಎಸ್. ಶುಲ್ಕವನ್ನು ಸಂಗ್ರಹಿಸಿದ ಮೊತ್ತವನ್ನು ಪ್ರಾಂಶುಪಾಲರು/ಎನ್.ಎಸ್.ಎಸ್. ಅಧಿಕಾರಿಯ ಹೆಸರಲ್ಲಿ ಪ್ರತ್ಯೇಕ ಬ್ಯಾಂಕಿನ ಖಾತೆಯನ್ನು ತೆರೆದು ಅದರಲ್ಲಿ ನಿರ್ವಹಿಸಬೇಕು.

7. ಎನ್.ಎಸ್.ಎಸ್.ಕಾರ್ಯಕ್ರಮಾಧಿಕಾರಿಗಳನ್ನು ಕಡ್ಡಾಯವಾಗಿ ಎನ್.ಎಸ್.ಎಸ್. ತರಬೇತಿಗೆ ನಿಯೋಜಿಸುವುದು.

8. ಎನ್.ಎಸ್.ಎಸ್.ಕಾರ್ಯಕ್ರಮಾಧಿಕಾರಿಗಳನ್ನು ವಿಶ್ವವಿದ್ಯಾಲಯದಿಂದ ಯಾವುದೇ ನಿಯೋಜನೆ ಮೇಲೆ ಕೋರಿದ್ದಲ್ಲಿ ನಿಯೋಜಿಸುವುದು.

9. 7 ದಿನಗಳ ಎನ್.ಎಸ್.ಎಸ್. ವಿಶೇಷ ಶಿಬಿರವನ್ನು ಪ್ರತೀ ವರ್ಷ ಕಡ್ಡಾಯವಾಗಿ ಆಯೋಜಿಸುವುದು.

10. ಎನ್.ಎಸ್.ಎಸ್.ಸ್ವಯಂಸೇವಕರನ್ನು ವಿಶ್ವವಿದ್ಯಾಲಯ/ರಾಜ್ಯ/ರಾಷ್ಟ್ರ ಮಟ್ಟದ ಕಾರ್ಯಕ್ರಮಗಳಿಗೆ ಕಳುಹಿಸುವುದು.

11. ಸದರಿ ಘಟಕ ಮಂಜೂರಾತಿ ಆದೇಶವು ಕಾಲಕಾಲಕ್ಕೆ ವಿಶ್ವವಿದ್ಯಾಲಯ / ಸರ್ಕಾರವು ಸೂಚಿಸುವ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

12. ಒಂದು ವೇಳೆ ಎನ್.ಎಸ್.ಎಸ್.ಕಾರ್ಯಚಟುವಟಿಕೆಗಳು ಸಮರ್ಪಕವಾದ ರೀತಿಯಲ್ಲಿ ನಡೆಯುತ್ತಿಲ್ಲ ಎಂದು ತಿಳಿದು ಬಂದಲ್ಲಿ ಎನ್.ಎಸ್.ಎಸ್.ಘಟಕವನ್ನು ಪರಾಮರ್ಶಿಸಿ ರದ್ದುಗೊಳಿಸಲಾಗುವುದು.

13. **ತಮ್ಮ ಕಾಲೇಜಿನಲ್ಲಿ ಎನ್.ಎಸ್.ಎಸ್.ಘಟಕವನ್ನು ಸ್ಥಾಪಿಸಿದ ನಂತರ ಪ್ರತೀ ವರ್ಷ ಈ ಕೆಳಕಂಡ ದಾಖಲೆಗಳನ್ನು ಎನ್.ಎಸ್.ಎಸ್. ಕಛೇರಿಗೆ ಕಡ್ಡಾಯವಾಗಿ ತಲುಪಿಸುವುದು.**

    1. ಎನ್.ಎಸ್.ಎಸ್. ಕಾರ್ಯಚಟುವಟಿಕೆಗಳ ಪ್ರಾರಂಭಕ್ಕೆ ಮುಂಚಿತವಾಗಿ
        (ಅ) ಎನ್.ಎಸ್.ಎಸ್. ಸ್ವಯಂ ಸೇವಕರ ನೊಂದಣಿ ಪಟ್ಟಿ
        (ಆ) ಕಾಲೇಜಿನ ವಿವರ/ಮಾಹಿತಿ
        (ಇ) ಎನ್.ಎಸ್.ಎಸ್. ಕಾರ್ಯಕ್ರಮಗಳ ವಾರ್ಷಿಕ ಕ್ರಿಯಾ ಯೋಜನೆ ಪಟ್ಟಿ
        (ಈ) ಎನ್.ಎಸ್.ಎಸ್. ಸಲಹಾ ಸಮಿತಿ ಸಭೆಯ ವಿವರ.
    2. 7 ದಿನಗಳ ವಾರ್ಷಿಕ ವಿಶೇಷ ಶಿಬಿರವನ್ನು ಆಯೋಜಿಸುವ 20 ದಿನಗಳು ಮೊದಲು ಪ್ರಸ್ತಾವನೆ, ಶಿಬಿರ ಆಯೋಜನೆಯ ಒಂದು ವಾರ ಮುಂಚಿತವಾಗಿ ಆಹ್ವಾನ ಪತ್ರಿಕೆ, ಶಿಬಿರ ಮುಕ್ತಾಯವಾದ 15 ದಿನದ ಒಳಗಾಗಿ ವರದಿ ಛಾಯಚಿತ್ರ ಮತ್ತು ಇತರೆ ದಾಖಲೆಗಳನ್ನು ಸಲ್ಲಿಸುವುದು.
    3. ಮಾರ್ಚ್ ತಿಂಗಳ ಒಳಗಾಗಿ ವಾರ್ಷಿಕ ವರದಿ ಮತ್ತು ಇತರೆ ದಾಖಲೆಗಳನ್ನು ಸಲ್ಲಿಸುವುದು.
    4. ಕಾಲಕಾಲಕ್ಕೆ ನಮ್ಮ ವಿಶ್ವವಿದ್ಯಾಲಯದಿಂದ ಬರುವ ಸುತ್ತೋಲೆ / ಪತ್ರಗಳಿಗೆ ಆದ್ಯತೆಯ ಮೇರೆಗೆ ಸ್ಪಂದಿಸುವುದು.

14. ಒಂದು ವೇಳೆ ಎನ್.ಎಸ್.ಎಸ್.ಗೆ ಸಂಬಂಧಿಸಿದ ದಾಖಲಾತಿಗಳು, ವರದಿ ಮತ್ತು ಇತರೇ ಮಾಹಿತಿಗಳನ್ನು ಕಾಲಕಾಲಕ್ಕೆ ಸಲ್ಲಿಸದಿದ್ದಲ್ಲಿ ಅದರ ಮುಂದಿನ ವರ್ಷ ಎನ್.ಎಸ್.ಎಸ್.ಘಟಕವನ್ನು ರದ್ದುಗೊಳಿಸಲಾಗುವುದು

16/8/22

ಕಾರ್ಯಕ್ರಮ ಸಂಯೋಜನಾಧಿಕಾರಿ (ಚು.
Programme Co-ordinator
NSS. Bangalore University
Bangalore-560056

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದ ಎಲ್ಲಾ ಕಾಲೇಜುಗಳಲ್ಲಿ ರಾಷ್ಟ್ರೀಯ ಸೇವಾ ಯೋಜನಾ ಘಟಕ (ಎನ್.ಎಸ್.ಎಸ್.) ಗಳನ್ನು ಸ್ಥಾಪಿಸುವ ಬಗ್ಗೆ.

ಓದಲಾಗಿದೆ:
1. ರಾಜ್ಯ ಸಂಪರ್ಕಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ರಾಷ್ಟ್ರೀಯ ಸೇವಾ ಯೋಜನಾ ಕೋಶ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಪತ್ರ ಸಂಖ್ಯೆ:ಯುಸೇಇ/ರಾಸೇಯೋ/06/2015-16/16, ದಿ:16.04.2015.
2. ಜಂಟಿ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಭಾರತ ಸರ್ಕಾರ ಇವರ ಪತ್ರ ಸಂಖ್ಯೆ:DD No.1-11020/2/2013-NSS, ದಿನಾಂಕ:28.01.2014.

ಪ್ರಸ್ತಾವನೆ:

ಮೇಲೆ ಓದಲಾದ (1) ರಲ್ಲಿ ಕಾಲೇಜುಗಳಲ್ಲಿ ಸ್ವಆರ್ಥಿಕ ಎನ್.ಎಸ್.ಎಸ್. ಘಟಕಗಳನ್ನು ಸ್ಥಾಪಿಸುವಂತೆ ಕೇಂದ್ರ ಸರ್ಕಾರವು ಸಲಹೆ ನೀಡಿದೆ. ಕೇಂದ್ರ ಸರ್ಕಾರವು ~~2014-15ನೇ ಸಾಲಿನಲ್ಲಿ~~ 2,70,000 ವಿದ್ಯಾರ್ಥಿ ಬಲವನ್ನು ಮಂಜೂರು ಮಾಡಿದೆ. ಅದರಲ್ಲಿ 1,10,000 ವಿದ್ಯಾರ್ಥಿ ಬಲವನ್ನು ವಿವಿಧ ನಿರ್ದೇಶನಾಲಯಗಳಿಗೆ ನೀಡಬೇಕಾಗುತ್ತದೆ. ಉಳಿದ 1,60,000 ಬಲವನ್ನು ವಿಶ್ವವಿದ್ಯಾನಿಲಯಗಳಿಗೆ ನೀಡಲಾಗುತ್ತಿದೆ. ರಾಜ್ಯದ ಒಟ್ಟು ವಿದ್ಯಾರ್ಥಿ ಸಂಖ್ಯೆಯ ಶೇಕಡ 30 ರಷ್ಟನ್ನು ಇದರಿಂದ ಮುಟ್ಟಲು ಸಾಧ್ಯವಾಗುವುದಿಲ್ಲ. ಕೆಲವು ವಿಶ್ವವಿದ್ಯಾನಿಲಯಗಳು ಈಗಾಗಲೇ ಎನ್.ಎಸ್.ಎಸ್‌ನ್ನು ಪರೀಕ್ಷಾ ಮೌಲ್ಯಮಾಪನಕ್ಕೂ ಅಳವಡಿಸಿಕೊಂಡಿದೆ. ಈ ದೃಷ್ಟಿಯಿಂದ ರಾಷ್ಟ್ರೀಯ ಸೇವಾ ಘಟಕಗಳನ್ನು ಸ್ಥಾಪಿಸಲು ಮೇಲೆ (2) ರಲ್ಲಿ ಓದಲಾದ ಪತ್ರದಲ್ಲಿ ಕೇಂದ್ರ ಸರ್ಕಾರವು ನೀಡಿದ ಸಲಹೆಯನ್ನು ಅನುಷ್ಠಾನಗೊಳಿಸುವುದು ಅನಿವಾರ್ಯವಾಗಿದ್ದು, ವಿದ್ಯಾರ್ಥಿಗಳಿಂದ ಈ ಬಗ್ಗೆ ಶುಲ್ಕವನ್ನು ಸಂಗ್ರಹಿಸುವ ಸಲಹೆ ನೀಡಿದೆ.

1. ಎನ್.ಎಸ್.ಎಸ್. ಘಟಕ ಇಲ್ಲದ ಕಾಲೇಜುಗಳಲ್ಲಿ ಎಲ್ಲಾ ವಿದ್ಯಾರ್ಥಿಗಳಿಂದ ರೂ.50/-
2. ಒಂದು ಘಟಕ ಇರುವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಂದ ರೂ.40/-

ಕಾಲೇಜುಗಳಲ್ಲಿ ಘಟಕವನ್ನು ನಿರ್ವಹಿಸುವಾಗ ಈ ಕೆಳಗಿನ ನಿಯಮಗಳನ್ನು ಅನುಸರಿಸಬೇಕು

1. ಸ್ವಆರ್ಥಿಕ ಘಟಕ ಸ್ಥಾಪನೆಯ ವಿಚಾರವನ್ನು ವಿಶ್ವವಿದ್ಯಾನಿಲಯದ ಎನ್.ಎಸ್.ಎಸ್ ಕೋಶಕ್ಕೆ ಮಾಹಿತಿ ನೀಡುವುದು. ಯೋಜನಾಧಿಕಾರಿಯನ್ನು ನೇಮಿಸಿ ಆ ವಿವರವನ್ನು ಎನ್.ಎಸ್.ಎಸ್ ಕೋಶಕ್ಕೆ ನೀಡುವುದು.
2. ಘಟಕಗಳ ಚಟುವಟಿಕೆಗಳ ವಾರ್ಷಿಕ ಮತ್ತು ಅರ್ಧ ವಾರ್ಷಿಕ ವರದಿಯನ್ನು 2006ರ ಎನ್.ಎಸ್.ಎಸ್ ಕೈಪಿಡಿಯ ನಿಯಮದಂತೆ ಸಲ್ಲಿಸುವುದು.
3. ನಿಯಮದಂತೆ ಸಲಹಾ ಸಮಿತಿಯನ್ನು ರಚಿಸಿ ಅನುಮೋದನೆ ಪಡೆಯುವುದು ಈಗಾಗಲೇ ಒಂದು ಘಟಕ ಇದ್ದಲ್ಲಿ ಅದೇ ಸಲಹಾ ಸಮಿತಿಯಲ್ಲಿ ಅನುಮೋದನೆ ಪಡೆಯಬಹುದು.
4. ವಿಶ್ವವಿದ್ಯಾನಿಲಯ ಎನ್.ಎಸ್.ಎಸ್ ಕೋಶಗಳು ಸ್ವಆರ್ಥಿಕ ಘಟಕಗಳ ಮಾಹಿತಿಯನ್ನು ರಾಜ್ಯ ಎನ್.ಎಸ್.ಎಸ್ ಕೋಶ ಮತ್ತು ಭಾರತ ಸರ್ಕಾರದ ಪ್ರಾದೇಶಿಕ ಕೇಂದ್ರಗಳಿಗೆ ನೀಡುವುದು.

5. ಸಂಗ್ರಹಿತ ಶುಲ್ಕದ ಮಾಹಿತಿಯನ್ನು ವಿಶ್ವವಿದ್ಯಾನಿಲಯದ ಎನ್.ಎಸ್.ಎಸ್ ಕೋಶದ ಮೂಲಕ ರಾಜ್ಯ ಕೋಶ ಹಾಗೂ ಪ್ರಾದೇಶಿಕ ಕೇಂದ್ರಕ್ಕೆ ತಿಳಿಸುವುದು. ಶುಲ್ಕದಿಂದ ಸಂಗ್ರಹವಾದ ಹಣವನ್ನು ವಿಶ್ವವಿದ್ಯಾನಿಲಯಗಳು ನೀಡುವ ಅನುದಾನವನ್ನು ಖರ್ಚು ಮಾಡುವ ರೀತಿಯಲ್ಲೇ ಖರ್ಚು ಮಾಡಿ ಭಾರತ ಸರ್ಕಾರದ ಎನ್.ಎಸ್.ಎಸ್ ಪ್ರಾದೇಶಿಕ ಕೇಂದ್ರಕ್ಕೆ ತಿಳಿಸುವುದು.
6. ಶುಲ್ಕ ಕುರಿತಾದ ಲೆಕ್ಕ ತಪಾಸಣೆಯನ್ನು ಹಾಗೂ ದಾಖಲೆಗಳನ್ನು ಇತರ ಅರೆ ಸರ್ಕಾರಿ ಖಾತೆಗಳಂತೆ ನಿರ್ವಹಿಸುವುದು.
7. ಕಾರ್ಯಕ್ರಮ ಅನುಷ್ಠಾನ ಮತ್ತು ಹಣದ ಬಳಕೆಯಲ್ಲಿ 2006ರ ಎನ್.ಎಸ್.ಎಸ್ ಕೈಪಿಡಿ ಮತ್ತು ಸ್ವಆರ್ಥಿಕ ಘಟಕ ಸ್ಥಾಪನೆಗೆ ಕೇಂದ್ರ ಸರ್ಕಾರ ನೀಡಿದ ನಿರ್ದೇಶನವನ್ನು ತಪ್ಪದೇ ಪಾಲಿಸುವುದು.
8. ಇತರ ಅನುದಾನ ಪಡೆದ ಘಟಕಗಳಂತೆ ವರ್ಷಾರಂಭದಲ್ಲಿ ವಿಶ್ವವಿದ್ಯಾನಿಲಯ ಕೋಶಕ್ಕೆ ನೋಂದಣಿ ಪಟ್ಟಿಯನ್ನು ಕಳುಹಿಸುವುದು ಹಾಗೂ ವಿಶ್ವವಿದ್ಯಾನಿಲಯವು ಒಂದು ವಿಶೇಷ ಶಿಬಿರ ಹಾಗೂ 240 ಗಂಟೆ ಪೂರೈಸಿದ ಸ್ವಯಂಸೇವಕರಿಗೆ ಪ್ರಮಾಣ ಪತ್ರವನ್ನು ನೀಡುವುದು.
9. ಯಾವುದೇ ಘಟಕ ಇಲ್ಲದ ಕಾಲೇಜುಗಳಲ್ಲಿ ಘಟಕ ಸ್ಥಾಪನೆ ನಂತರ ಶುಲ್ಕ ಸಂಗ್ರಹ ಹಣದಲ್ಲಿ ವಿಶೇಷ ಶಿಬಿರ ನಡೆಸಬಹುದು. ಘಟಕಗಳಿರುವ ಕಾಲೇಜುಗಳಲ್ಲಿ ಸ್ವಆರ್ಥಿಕ ಘಟಕದ ಸ್ವಯಂಸೇವಕರು ಉಳಿದವರಂತೆ ಯಾವುದೇ ಶಿಬಿರದಲ್ಲಿ ಭಾಗವಹಿಸಬಹುದು. ಅವರನ್ನು ವಿಶ್ವವಿದ್ಯಾನಿಲಯದ ಇತರ ಎನ್.ಎಸ್.ಎಸ್ ಸ್ವಯಂ ಸೇವಕರಿಗೆ ಸೌಲಭ್ಯವನ್ನು ಒದಗಿಸುವುದು.

ಈ ಮೇಲಿನ ಅಂಶಗಳನ್ನು ಪರಿಗಣಿಸಿ ಈ ಬಗ್ಗೆ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 11 ವಿವಿಧ 2015,**
**ಬೆಂಗಳೂರು, ದಿನಾಂಕ: 4ನೇ ಮೇ 2015.**

ಮೇಲೆ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿನ ಎಲ್ಲಾ ಕಾಲೇಜುಗಳಲ್ಲಿ ಸ್ವಆರ್ಥಿಕ ಎನ್.ಎಸ್.ಎಸ್. ಘಟಕಗಳನ್ನು ಸ್ಥಾಪಿಸಿ, ನಿರ್ವಹಿಸುವ ಕುರಿತಂತೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ: ಭಾರತ ಸರ್ಕಾರ ಪತ್ರ ಸಂಖ್ಯೆ:DD No.1-11020/2/2013-NSS, ದಿನಾಂಕ:28.01.2014ರನ್ವಯ

1. ಎನ್.ಎಸ್.ಎಸ್. ಘಟಕ ಇಲ್ಲದ ಕಾಲೇಜುಗಳಲ್ಲಿ ಎಲ್ಲಾ ವಿದ್ಯಾರ್ಥಿಗಳಿಂದ ರೂ.50/-
2. ಒಂದು ಘಟಕ ಇರುವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಂದ ರೂ.40/-ಗಳ

ಶುಲ್ಕವನ್ನು ಕಾಲೇಜು ಪ್ರವೇಶಾತಿ ಶುಲ್ಕದಲ್ಲಿ ಅಳವಡಿಸಿ ಕ್ರೋಢೀಕರಿಸಿ ಅದರ ಮೂಲಕ ರಾಜ್ಯದಲ್ಲಿನ ಕಾಲೇಜುಗಳಲ್ಲಿ ಸ್ವಆರ್ಥಿಕ ಎನ್.ಎಸ್.ಎಸ್. ಘಟಕಗಳನ್ನು ಸ್ಥಾಪಿಸಿ ಆಯಾ ಕಾಲೇಜುಗಳಲ್ಲಿಯೇ ನಿರ್ವಹಿಸುವಂತೆ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ ಆದೇಶಿಸಲಾಗಿದೆ.

1. ಎನ್.ಎಸ್.ಎಸ್. ಕೋಶ ಸ್ಥಾಪಿಸಿ, ಈ ಸಂಬಂಧ ಎನ್.ಎಸ್.ಎಸ್.ನ ಎಲ್ಲಾ ಕಾರ್ಯಚಟುವಟಿಕೆಗಳನ್ನು ನಿರ್ವಹಿಸತಕ್ಕದ್ದು.

.....3

-2-

2. ಸದರಿ ಕೋಶದಲ್ಲಿನ ಹಣವನ್ನು ಎನ್.ಎಸ್.ಎಸ್. ಕಾರ್ಯಗಳಿಗೆ ಹೊರತಾಗಿ ಇನ್ನಾವುದೇ ಕಾರ್ಯಕ್ಕೆ ಬಳಸತಕ್ಕದ್ದಲ್ಲ.

3. ಸದರಿ ಕೋಶದ ಖಾತೆ ಮತ್ತು ವ್ಯವಹಾರಗಳನ್ನು ಆಯಾ ಹಣಕಾಸು ವರ್ಷದ ಕೊನೆಯ ಅವಧಿಯಲ್ಲಿ ಅಥವಾ ವರ್ಷದ ನಂತರದ 3 ತಿಂಗಳೊಳಗೆ ಪ್ರತ್ಯೇಕವಾಗಿ ಲೆಕ್ಕಪರಿಶೋಧನೆ ಮಾಡಿಸಿ ಸಂಬಂಧಿಸಿದ ಇಲಾಖೆಗಳಿಗೆ ವರದಿಸತಕ್ಕದ್ದು. ತಪ್ಪಿದ್ದಲ್ಲಿ ಸಂಬಂಧಿತ ಇಲಾಖೆಗಳು ಕಾನೂನಿನನ್ವಯ ಕ್ರಮವಹಿಸುವಂತೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ.ಎಲ್.ಸುಬ್ರಮಣ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ಸಾಮಾನ್ಯ-2)
04/5/15

ಇವರಿಗೆ,

1. ಮಹಾಲೇಖಪಾಲರು ಎ ಮತ್ತು ಇ-ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು-560 001.
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು-560 001.
4. ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳು/ಕುಲಸಚಿವರು.
5. ಮುಖ್ಯಸ್ಥರು, ಭಾರತ ಸರ್ಕಾರದ ಎನ್.ಎಸ್.ಎಸ್. ಪ್ರಾದೇಶಿಕ ಕಛೇರಿ, ಬಸವನಗುಡಿ, ಬೆಂಗಳೂರು.
6. ರಾಜ್ಯ ಸಂಪರ್ಕಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ರಾಷ್ಟ್ರೀಯ ಸೇವಾ ಯೋಜನೆ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
7. ಸರ್ಕಾರದ ಉಪ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ಕಾಲೇಜು & ತಾಂತ್ರಿಕ ಶಿಕ್ಷಣ)
8. ಸರ್ಕಾರದ ಉಪ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು & ಸಮನ್ವಯ)
9. ಆಡಳಿತಾಧಿಕಾರಿಗಳು, ಎನ್.ಸಿ.ಸಿ. ಇಲಾಖೆ, ನಂ.08, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು-560 052.
10. ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರ ಆಪ್ತ ಕಾರ್ಯದರ್ಶಿ.
11. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.